(ಇಂದು ದಿನಾಂಕಃ **30-10-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ಈ ದಾವೆಯಲ್ಲಿ ಹೇಮರಡ್ಡಿ ಹಾಗೂ ಚವರಡ್ಡಿಯವರು ಸಹೋದರರು ಎಂದರೆ ಸರಿ. ದಾವೆಯಲ್ಲಿ ಸರ್ವೆ ನಂಃ 41 ರಲ್ಲಿ 5 ಎಕರೆ 22 ಗುಂಟೆ ಕ್ಷೇತ್ರಕ್ಕೆ ಮಾತ್ರ ದಾವಾ ಆಸ್ತಿಯನ್ನಾಗಿ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಡಿಕ್ರಿಯಾದ ನಂತರ ಈ ದಾವೆ ಸಲ್ಲಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಈ ಹಿಂದೆ ಲಕ್ಷ್ಮವ್ವ ಎನ್ನುವವರು ಪಾಲು ವಿಭಾಗ ಕೋರಿ ಸಲ್ಲಿಸಿದ್ದ ದಾವೆ ಡಿಕ್ರಿಯಾದ ನಂತರ ಈ ದಾವೆ ಸಲ್ಲಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಡಿಕ್ರಿಯಾದ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಡಿ-20 ನ್ನು ನನ್ನ ಅಣ್ಣನ ಹೆಂಡತಿ ಮತ್ತು ಮಗ ಸಲ್ಲಿಸಿದ್ದರು ಎಂದರೆ ಸರಿ. ಪ್ರಸ್ತುತ ದಾವೆಯ ಪಕ್ಷಕಾರರು ಸದರಿ ದಾವೆಯಲ್ಲಿ ಪಕ್ಷಕಾರರಾಗಿರಲಿಲ್ಲ ಎಂದರೆ ಸರಿ. ಸದರಿ ದಾವೆಯನ್ನು ಚವರಡ್ಡಿಯವರ ಆಸ್ತಿಗೆ ಸಂಬಂಧಿಸಿ ಮಾತ್ರ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯ ಆಸ್ತಿಗೂ ಹಾಗೂ ಪ್ರಸ್ತುತ ದಾವಾ ಆಸ್ತಿಗೂ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿ ಸಾಕ್ಷಿ ಸಹ ನುಡಿದಿರುತ್ತೇನೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರದಲ್ಲಿ ಲಕ್ಷ್ಮವ್ವ ರವರು ಸಲ್ಲಿಸಿದ್ದ ದಾವೆಯ ರಾಜೀಯನ್ನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಆಗ ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರದ ಕಾರಣ ಒಪ್ಪಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ರಾಜೀಯ ಪ್ರಕಾರ ನನ್ನ ತಂದೆ ರೂ.3,00,000/- ಗಳನ್ನು ಪಡೆದುಕೊಂಡು ಆಸ್ತಿಯನ್ನು ಲಕ್ಷ್ಮವ್ವ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರು ಹೇಮರಡ್ಡಿಯ ವಾರಸುದಾರರು ಎಂದರೆ ಸರಿ. ಹೇಮರಡ್ಡಿಯ ಆಸ್ತಿಯನ್ನು ನೀಡಲು ನನ್ನದು ತಕರಾರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಜಮೀನು ಸರ್ವೆ ನಂಃ 41 ರಲ್ಲಿ ನಮಗೆ ಪಾಲು ಬರಬೇಕು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಮಾತು ಕೇಳಿ ಕಾಲಹರಣ ಮಾಡುವ ಉದ್ದೇಶದಿಂದ ದಾವೆಗೆ ಸಂಬಂಧವಿರದ ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**